ಅಸಲು ದಾವೆ ನಂ.83/2020

ಪಿ.ಡಬ್ಲೂಃ 3- ಪನಿಂದ್ರ ಬಿನ್ ಬದ್ರಿನಾಥ್

ದಿನಾಂಕಃ 20/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರವಾಗಿ ಶ್ರೀಮತಿ ಹೆಚ್ ವಿ ಸಿ ವಕೀಲರಿಂದ**

ನಾನು ಈ ದಾವೆಯಲ್ಲಿ ಸಾಕ್ಷಿದಾರನಾಗಿದ್ದು ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಮ್ಮ ತಂದೆಯಾದ ಬದ್ರಿನಾಥ್ ಬಿನ್ ಕೃಷ್ಣಾರಾವ್ ರವರು ಸುಮಾರು 1981 ರಿಂದ 2018 ರವರೆಗೆ ಬಂಗಾರಪೇಟೆಯಲ್ಲಿ ದಸ್ತು ಬರಹಗಾರರು ಎಂದು ಕೆಲಸ ಮಾಡಿದ್ದು ಅವರು ದಿನಾಂಕ **19.04.2018** ರಂದು ಮರಣ ಹೊಂದಿರುತ್ತಾರೆ. ಅವರು ತಮ್ಮ ಜೀವನದಲ್ಲಿ ಹಲವಾರು ಪತ್ರಗಳನ್ನು ಬರೆದಿದ್ದು ನಾನು ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನನಗೆ ತೋರಿಸಿದ ದಾಖಲೆಯು ಒಂದು ವಿಲ್ ಆಗಿದ್ದು ಅದರಲ್ಲಿ ಇಚ್ಛಾಕರ್ತರು ಎಂದು ಬರೆದು ಮಾಡಿರುವ ಸಹಿಗಳು ನಮ್ಮ ತಂದೆಯ ಸಹಿಗಳು ಆಗಿರುತ್ತವೆ. ಸದರಿ ದಾಖಲೆಯನ್ನು ಈಗ ನಿಪಿ-9 ಹಾಗೂ ಅದರ ಮೇಲೆ ಇರುವ ನಮ್ಮ ತಂದೆಯ 4 ಸಹಿಗಳನ್ನು ನಿಪಿ-9(ಎ) ರಿಂದ (ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಎನ್ ಎಸ್ ವಕೀಲರಿಂದ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)

**1** ನೇ ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ

ಕೆಜಿಎಫ್ (ಸಂಚಾರಿ ಪೀಠ ಬಂಗಾರಪೇಟೆ).